**1436 (1671) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ)** – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರಾಜೀವ್ ಗಾಂಧಿ ವಿದ್ಯುದ್ದೀಕರಣ ಯೋಜನೆ ಮಂಜೂರಾಗಿರುವ ಜಿಲ್ಲೆಗಳು ಎಷ್ಟು,

ಆ) ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಿಗೆ ಈ ಯೋಜನೆಯನ್ನು ಒಳಪಡಿಸಿದೆಯೇ,

ಇ) ಈ ಯೋಜನೆಗೆ ಬಿಡುಗಡೆಯಾದ ಅನುದಾನವೆಷ್ಟು (ಜಿಲ್ಲಾವಾರು ವಿವರ ನೀಡುವುದು),

ಈ) ಈ ಯೋಜನೆ ಪೂರ್ಣವಾಗಲು ನಿಗದಿ ಪಡಿಸಿರುವ ಸಮಯವೆಷ್ಟು,

ಉ) ಈ ಯೋಜನೆ ಈಗ ಯಾವ ಹಂತದಲ್ಲಿ ನಡೆಯುತ್ತಿದೆ?

**ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)**

ಅ) ರಾಜ್ಯದಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯು 26 ಜಿಲ್ಲೆಗಳಿಗೆ (ಬೆಂಗಳೂರು ನಗರ ಜಿಲ್ಲೆಯನ್ನು ಹೊರತುಪಡಿಸಿ) ಮಂಜೂರಾಗಿದೆ

ಆ) ಹೌದು ಒಳಪಡಿಸಲಾಗಿದೆ

ಇ) ಈ ಯೋಜನೆಗೆ ಇದುವರೆವಿಗೆ ಬಿಡುಗಡೆಯಾದ ಅನುದಾನದ ಒಟ್ಟು ಮೊತ್ತ 134 32 ಕೋಟಿಗಳು ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ

ಈ) ಮೊದಲನೆಯ ಹಂತದಲ್ಲಿ ಮಂಜೂರಾಗಿರುವ 17 ಜಿಲ್ಲೆಗಳಿಗೆ ಡಿಸೆಂಬರ್ – 2005 ರಲ್ಲಿ ಅನುಮೋದನೆ ದೊರೆತಿದ್ದು, 2006–07ರ ಅಂತ್ಯದೊಳಗೆ ಪೂರ್ಣಗೊಳಿಸಲು ಕಾಲಮಿತಿಯನ್ನು ನಿಗದಿಪಡಿಸಲಾಗಿರುತ್ತದೆ

ಎರಡನೆಯ ಹಂತದಲ್ಲಿ ಮಂಜೂರಾಗಿರುವ 9 ಜಿಲ್ಲೆಗಳಿಗೆ ಡಿಸೆಂಬರ್ – 2006 ರಲ್ಲಿ ಅನುಮೋದನೆ ದೊರೆತಿದ್ದು, ಯೋಜನೆಯನ್ನು ಪೂರ್ಣಗೊಳಿಸಲು ನಿಗದಿಪಡಿಸಿರುವ ಕಾಲಮಿತಿ 2 ವರ್ಷಗಳು

ಉ) **ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ**

ಮಂಡ್ಯ ಮೈಸೂರು ಹಾಗೂ ಹಾಸನದಲ್ಲಿ ಈಗಾಗಲೇ ಈ ಯೋಜನೆಯು ಮುಗಿಯುವ ಹಂತದಲ್ಲಿದ್ದು, ಮಾರ್ಚ್–2007ರ ಅಂತ್ಯಕ್ಕೆ ಮುಕ್ತಾಯಗೊಳಿಸುವ ಕಾರ್ಯಯೋಜನೆ ಇದೆ ಚಾಮರಾಜನಗರ ಜಿಲ್ಲೆಯಲ್ಲಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಒಂದು ವರ್ಷದೊಳಗೆ ಮುಗಿಸಲಾಗುವುದು ಕೊಡಗು ಜಿಲ್ಲೆಯಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಶೀಘ್ರದಲ್ಲಿಯೇ ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ವಹಿಸಲಾಗುವುದು

**ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ**

ಬೀದರ್, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಫೆಬ್ರವರಿ–06 ರಲ್ಲಿ ಸಮಗ್ರ ಗುತ್ತಿಗೆಯ ಆಧಾರದ ಮೇಲೆ ಕೆಲಸಗಳನ್ನು ವಹಿಸಿಕೊಡಲಾಗಿದೆ ಗುಲ್ಬರ್ಗಾ ಜಿಲ್ಲೆಯ ಯೋಜನೆ ಡಿಸೆಂಬರ್ – 2006ರಂದು ಮಂಜೂರಾಗಿದ್ದು, ಟೆಂಡರ್ ಕರೆದು, ಗುತ್ತಿಗೆದಾರರಿಗೆ ಕೆಲಸವನ್ನು ವಹಿಸಿಕೊಡಲಾಗಿದೆ

**ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ**

ಧಾರವಾಡ, ಗದಗ್, ಹಾವೇರಿ, ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳ ಕೆಲಸವನ್ನು ಫೆಬ್ರುವರಿ–2006 ರಲ್ಲಿ ಅವಾರ್ಡ್ ಮಾಡಲಾಗಿದ್ದು, ಕೆಲಸಗಳು ಪ್ರಗತಿಯಲ್ಲಿವೆ ಉತ್ತರ ಕನ್ನಡ ಹಾಗೂ ಬೆಳಗಾವಿ ಜಿಲ್ಲೆಗಳ ಯೋಜನೆ ಡಿಸೆಂಬರ್–06 ರಲ್ಲಿ ಮಂಜೂರಾಗಿದ್ದು, ಬೆಳಗಾವಿ ಜಿಲ್ಲೆಯ ಯೋಜನೆಯ ಟೆಂಡರ್‌ಗಳನ್ನು ಇತ್ಯರ್ಥಪಡಿಸಿ ಗುತ್ತೆದಾರರಿಗೆ ಕೆಲಸಗಳನ್ನು ವಹಿಸಿಕೊಡಲಾಗಿದೆ ಉತ್ತರ ಕನ್ನಡ ಜಿಲ್ಲೆಯ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಶೀಘ್ರದಲ್ಲಿಯೇ ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ವಹಿಸಲಾಗುವುದು

**ಮಂಗಳೂರು ವಿದ್ಯುತ್ ಸರಬರಾಜು ಕಂಪನಿ**

ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳ ಯೋಜನೆಗಳು ಡಿಸೆಂಬರ್–06 ರಲ್ಲಿ ಮಂಜೂರಾಗಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವ ಹಂತದಲ್ಲಿದೆ

**ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ**

ದಾವಣಗೆರೆ, ತುಮಕೂರು, ಚಿತ್ರದುರ್ಗ, ಬೆಂಗಳೂರು ಗ್ರಾಮಾಂತರ ಮತ್ತು ಕೋಲಾರ ಜಿಲ್ಲೆಗಳಿಗೆ ಫೆಬ್ರುವರಿ – 06 ರಲ್ಲಿ ಮಂಜೂರಾಗಿದ್ದು, ಸಮಗ್ರ ಗುತ್ತಿಗೆ ಆಧಾರದ ಮೇಲೆ ಕೆಲಸಗಳನ್ನು ವಹಿಸಿಕೊಡಲಾಗಿದೆ ಕೆಲಸಗಳು ಪ್ರಗತಿಯಲ್ಲಿವೆ

**ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಧ್ರುವನಾಯಣ ಆರ್ ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ 1671 ಕ್ಕೆ ಅನುಬಂಧ**

**ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿ ಬಿಡುಗಡೆಯಾದ ಅನುದಾನದ ಜಿಲ್ಲಾವಾರು ವಿವರಗಳು –**

**(ಕೋಟಿ ರೂ ಗಳಲ್ಲಿ)**

| ಕ್ರ ಸಂ | ಜಿಲ್ಲೆಗಳು | ಮಂಜೂರಾದ ಹಣ | ಬಿಡುಗಡೆಯಾದ ಅನುದಾನ |
|---|---|---|---|
| 1 | ದಾವಣಗೆರೆ | 29 72 | 6 64 |
| 2 | ತುಮಕೂರು | 16 26 | 3 7 |
| 3 | ಚಿತ್ರದುರ್ಗ | 29 24 | 7 15 |
| 4 | ಬೆಂಗಳೂರು (ಗ್ರಾ) | 26 04 | 6 04 |
| 5 | ಕೋಲಾರ | 22 01 | 4 95 |
| 6 | ಕೊಪ್ಪಳ | 17 33 | 7 45 |
| 7 | ಬಳ್ಳಾರಿ | 22 54 | 9 68 |
| 8 | ಬೀದರ್ | 16 74 | 7 19 |
| 9 | ರಾಯಚೂರು | 21 78 | 9 36 |
| 10 | ಗುಲ್ಬರ್ಗಾ | 39 25 | ಬಿಡುಗಡೆಯಾಗ ಬೇಕಾಗಿರುತ್ತದೆ |

| | | | |
|---|---|---|---|
| 11 | ಬಾಗಲಕೋಟೆ | 25 57 | 11 21 |
| 12 | ಹಾವೇರಿ | 19 61 | 6 84 |
| 13 | ಬಿಜಾಪುರ | 23 29 | 9 38 |
| 14 | ಧಾರವಾಡ | 13 29 | 5 62 |
| 15 | ಗದಗ | 13 82 | 6 76 |
| 16 | ಬೆಳಗಾವಿ | 23 63 | ಬಿಡುಗಡೆಯಾಗ ಬೇಕಾಗಿರುತ್ತದೆ |
| 17 | ಉತ್ತರ ಕನ್ನಡ | 41 56 | ಬಿಡುಗಡೆಯಾಗ ಬೇಕಾಗಿರುತ್ತದೆ |
| 18 | ಮಂಡ್ಯ | 8 19 | 3 92 |
| 19 | ಹಾಸನ | 32 54 | 14 98 |
| 20 | ಮೈಸೂರು | 37 42 | 13 42 |
| 21 | ಕೊಡಗು | 33 61 | ಬಿಡುಗಡೆಯಾಗ ಬೇಕಾಗಿರುತ್ತದೆ |
| 22 | ಚಾಮರಾಜನಗರ | 9 73 | ಬಿಡುಗಡೆಯಾಗ ಬೇಕಾಗಿರುತ್ತದೆ |
| 23 | ದಕ್ಷಿಣ ಕನ್ನಡ | 24 60 | ಬಿಡುಗಡೆಯಾಗ ಬೇಕಾಗಿರುತ್ತದೆ |
| 24 | ಶಿವಮೊಗ್ಗ | 21 93 | ಬಿಡುಗಡೆಯಾಗ ಬೇಕಾಗಿರುತ್ತದೆ |
| 25 | ಚಿಕ್ಕಮಗಳೂರು | 29 23 | ಬಿಡುಗಡೆಯಾಗ ಬೇಕಾಗಿರುತ್ತದೆ |
| 26 | ಉಡುಪಿ | 14 45 | ಬಿಡುಗಡೆಯಾಗ ಬೇಕಾಗಿರುತ್ತದೆ |
| | **ಒಟ್ಟು ಅನುದಾನ** | **613 37** | **134 32** |

**1439 (1890) ಶ್ರೀ ಗೋಪಾಲ ಪೂಜಾರಿ ಕೆ (ಬೈಂದೂರು) .–** ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?